## ಕಲಿಕೆಗಾಗಿ ಹೊಸ ಹಾದಿ ತೆರೆಯೋಣ

# *ಮುನ್ನಡೆಯುವ*

BRIDGE MATERIALS FOR CLASS X

## ತರಗತಿ – 10

# ಸಮಾಜವಿಜ್ಞಾನ

## (SOCIAL SCIENCE)

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಎಸ್.ಸಿ.ಇ.ಆರ್.ಟಿ.)**

**ಕೇರಳ**

**2022**

ಆತ್ಮೀಯ ಮಕ್ಕಳೇ,

ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ (2020–21 ಮತ್ತು 2021–22) ಕೋವಿಡ್‌ನಿಂದಾಗಿ ಶಾಲೆಗಳನ್ನು ಸಂಪೂರ್ಣವಾಗಿ ತೆರೆಯಲಾಗಲಿಲ್ಲ. ಆದ್ದರಿಂದ ಪ್ರತಿ ತರಗತಿಯಲ್ಲಿ ಕಲಿಯಬೇಕಾದ ಆಶಯಗಳು ಮತ್ತು ಕೌಶಲ್ಯಗಳನ್ನು ಪಡೆದುಕೊಳ್ಳುವಲ್ಲಿ ಕೆಲವು ಲೋಪಗಳು ಕಂಡುಬಂದಿವೆ. ಕಾಲುವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳ ವಿಶ್ಲೇಷಣೆ ಮತ್ತು ಶಿಕ್ಷಕರೊಂದಿಗೆ ಸಂವಾದದ ಆಧಾರದ ಮೇಲೆ ಇದು ಕಂಡುಬಂದಿದೆ. ಪರಿಣಾಮಕಾರಿಯಾಗಿ ಮುಂದುವರಿದ ಶಿಕ್ಷಣವನ್ನು ಸಕ್ರಿಯಗೊಳಿಸಲು ಈ ಕಲಿಕೆಯ ಅಂತರವನ್ನು ಪರಿಹರಿಸುವುದು ಅತ್ಯಗತ್ಯ. ಪ್ರತಿ ತರಗತಿಯ ಪಾಠಗಳನ್ನು ಕಲಿಯುವ ಪೂರ್ವಜ್ಞಾನವನ್ನು ಖಚಿತಪಡಿಸಿಕೊಳ್ಳುವುದು ಉತ್ತಮ. ಇದು ಪ್ರತಿ ತರಗತಿಗೆ ಅಗತ್ಯವಾದ ಪೂರ್ವಜ್ಞಾನವನ್ನು ಖಚಿತಪಡಿಸಿಕೊಳ್ಳಲು ಚಟುವಟಿಕೆಗಳನ್ನು ಒಳಗೊಂಡಿರುವ ಕಿರು ಪುಸ್ತಕ ಆಗಿದೆ. ಆ ಪುಸ್ತಕದಲ್ಲಿನ ಚಟುವಟಿಕೆಗಳನ್ನು ನಿಮ್ಮ ಸ್ವಂತ ಅಥವಾ ಶಿಕ್ಷಕರ ಸಹಾಯದಿಂದ ಪೂರ್ಣಗೊಳಿಸಬೇಕು. ಕಲಿಕೆಯ ಅಂತರವನ್ನು ಪರಿಹರಿಸಲು ಮತ್ತು ನಿಮ್ಮ ಅಧ್ಯಯನವನ್ನು ಹೆಚ್ಚು ಆತ್ಮವಿಶ್ವಾಸದಿಂದ ಮುಂದುವರಿಸಲು ನಾನು ಬಯಸುತ್ತೇನೆ.

**ನಿರ್ದೇಶಕರು**

ಎಸ್.ಸಿ.ಇ.ಆರ್.ಟಿ.

# ಸಮಾಜವಿಜ್ಞಾನ - I

## ಯೂನಿಟ್ – 1
## ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು

**ಚಟುವಟಿಕೆ 1**

**ಕಲಿಕಾ ಸಾಧನೆ :**

- ತರಗತಿ 7 – ಯೂನಿಟ್ 1 : ಪರಿವರ್ತನೆಯ ಹಾದಿಯಲ್ಲಿ ಯುರೋಪ್

**ಆಶಯ :**


■ ನವೋತ್ಥಾನದ ಅವಿರ್ಭಾವಕ್ಕೆ ಕಾರಣವಾದ ಸನ್ನಿವೇಶಗಳನ್ನು ವಿವರಿಸುವುದು.

**ಕಲಿಕಾ ಸಾಧನೆ :**

- ತರಗತಿ 10 ಯೂನಿಟ್ 1 : ಜಗತ್ತನ್ನು ಪರಿವರ್ತಿಸಿದ ಕ್ರಾಂತಿಗಳು

**ಆಶಯ :**

■ ನವೋತ್ಥಾನದ ವಿಶೇಷತೆಗಳನ್ನು ಸೂಚಿಸುವ ಪದಸೂರ್ಯವನ್ನು ಭರ್ತಿ ಮಾಡಿರಿ.




**ಚಟುವಟಿಕೆ 2**

**ಕಲಿಕಾ ಸಾಧನೆ :**

■ ಅಮೇರಿಕಾದ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯನ್ನು ವಿವರಿಸುವುದು.

**ಆಶಯ :**

- ಅಮೇರಿಕಾದ ಸ್ವಾತಂತ್ರ್ಯ ಹೋರಾಟ.

- ಅಮೇರಿಕಾದ ವಸಾಹತುಗಳಲ್ಲಿ ಬ್ರಿಟೀಷರು ಜ್ಯಾರಿಗೊಳಿಸಿದ ಮರ್ಕಂಟಲಿಸ್ಟ್ ನಿಯಮಗಳಿಗೆ ಸಂಬಂಧಿಸಿದ ವರ್ಕ್‌ಶೀಟ್ ಭರ್ತಿ ಮಾಡಿರಿ.

ಮರ್ಕಂಟಲಿಸ್ಟ್ ನಿಯಮಗಳು

ವಸಾಹತುಗಳಿಗೆ ಆಮದು ಮಾಡುವ ಚಾ, ಗ್ಲಾಸ್, ಕಾಗದ ಇತ್ಯಾದಿಗಳಿಗೆ ಆಮದು ಸುಂಕವನ್ನು ನೀಡಬೇಕು.

- ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳ ರೂಪೀಕರಣಕ್ಕೆ ಸಂಬಂಧಿಸಿದ ಫ್ಲೋಚಾರ್ಟ್‌ನ್ನು ಭರ್ತಿಮಾಡಿರಿ.

ಅಮೇರಿಕಾದ ಸಂಯುಕ್ತ ಪ್ರಾಂತ್ಯಗಳ ರೂಪೀಕರಣ

↓

1774ರ ಒಂದನೆಯ ಕೋಂಟಿನೆಂಟಲ್ ಕಾಂಗ್ರೆಸ್

↓

↓

↓

**ಚಟುವಟಿಕೆ 4**


**ಕಲಿಕಾ ಸಾಧನೆ :**

- ಫ್ರೆಂಚ್ ಕ್ರಾಂತಿಯ ಪ್ರಭಾವವನ್ನು ವಿಶ್ಲೇಷಿಸುವುದು.

**ಆಶಯ :**

ಫ್ರೆಂಚ್ ಕ್ರಾಂತಿ

■ ಫ್ರೆಂಚ್ ಕ್ರಾಂತಿಯು ಜಗತ್ತಿನಲ್ಲಿ ಬೀರಿದ ಪ್ರಭಾವದ ಕುರಿತಾದ ಚಾರ್ಟ್ ಭರ್ತಿ ಮಾಡಿರಿ.




**ಚಟುವಟಿಕೆ 5**

**ಕಲಿಕಾ ಸಾಧನೆ :**

■ ವಸಾಹತುಶಾಹೀ ಆಡಳಿತವು ಲ್ಯಾಟಿನ್ ಅಮೇರಿಕನ್ ಕ್ರಾಂತಿಗೆ ಹೇಗೆ ಕಾರಣವಾಯಿತು. ? ಪಟ್ಟಿ ಮಾಡಿರಿ.

- ಲ್ಯಾಟಿನ್ ಅಮೇರಿಕಾದ ನಾಗರಿಕತೆಯನ್ನು ನಾಶ ಮಾಡಿದರು.
-
-
-
-

**ಚಟುವಟಿಕೆ 6**


**ಕಲಿಕಾ ಸಾಧನೆ**

- ರಷ್ಯಾದ ಕ್ರಾಂತಿಗೆ ಕಾರಣವಾದ ಘಟಕಗಳನ್ನು ವಿಶ್ಲೇಷಿಸುವುದು.

**ಆಶಯ :**

ರಷ್ಯಾದ ಕ್ರಾಂತಿ

■ ರಷ್ಯನ್ ಕ್ರಾಂತಿಗೆ ಕಾರಣವಾದ ಘಟಕಗಳನ್ನು ಕಂಡುಹಿಡಿದು ಪದಸೂರ್ಯ ಭರ್ತಿಮಾಡಿರಿ.




**ಚಟುವಟಿಕೆ 7**

■ ಫೆಬ್ರವರಿ ಕ್ರಾಂತಿ, ಒಕ್ಟೋಬರ್ ಕ್ರಾಂತಿ ಎಂಬಿವುಗಳನ್ನು ಪರಸ್ಪರ ಹೋಲಿಸಿರಿ ಮತ್ತು ಕೆಳಗಿನ ಪಟ್ಟಿಯನ್ನು ಭರ್ತಿ ಮಾಡಿರಿ.

| ಫೆಬ್ರವರಿ ಕ್ರಾಂತಿ | ಒಕ್ಟೋಬರ್ ಕ್ರಾಂತಿ |
|---|---|
| ಮೆನ್ಶವಿಕ್‌ಗಳು ನೇತೃತ್ವ ನೀಡಿದರು | ಬೋಲ್ಶೆವಿಕ್‌ನವರು ನೇತೃತ್ವ ನೀಡಿದರು. |
| | |
| | |
| | |
| | |

**ಚಟುವಟಿಕೆ 8**

**ಕಲಿಕಾ ಸಾಧನೆ :**

- ಚೈನಾದ ಕ್ರಾಂತಿಯ ವಿವಿಧ ಹಂತಗಳನ್ನು ವಿವರಿಸಿರಿ.

**ಆಶಯ :**

ಚೈನಾದ ಕ್ರಾಂತಿ

■ ಚೈನಾದ ಕ್ರಾಂತಿಯ ವಿವಿಧ ಹಂತಗಳನ್ನು ಪಟ್ಟಿ ಮಾಡಿರಿ.

- ಮಾಂಚು ರಾಜವಂಶವು ವಿದೇಶೀ ಆಡಳಿತಕ್ಕೆ ಅನುಕೂಲಕರವಾದ ಧೋರಣೆಗಳನ್ನು ಸ್ವೀಕರಿಸಿತು.
-
-
-
-

ಯೂನಿಟ್ – 2

## ಇಪ್ಪತ್ತನೇ ಶತಮಾನದ ಜಗತ್ತು

**ಚಟುವಟಿಕೆ 1**

- ತರಗತಿ 7 – ಯೂನಿಟ್ 1 : ಪರಿವರ್ತನೆಯ ಹಾದಿಯಲ್ಲಿ

**ಕಲಿಕಾ ಸಾಧನೆ**

ಯುರೋಪ್

- ವೈಜ್ಞಾನಿಕ–ತಾಂತ್ರಿಕ ಕ್ಷೇತ್ರದಲ್ಲುಂಟಾದ ಬೆಳವಣಿಗೆಯು ಕೈಗಾರಿಕಾ ಕ್ರಾಂತಿಗೆ ಕಾರಣವಾಯಿತೆಂದು ವಿವರಿಸುವುದು.

ಯೂನಿಟ್ 2 : ಇಪ್ಪತ್ತನೇ ಶತಮಾನದ ಜಗತ್ತು


**ಕಲಿಕಾ ಸಾಧನೆ :**

- ಸಾಮ್ರಾಜ್ಯಶಾಹಿತ್ವದ ಬೆಳವಣಿಗೆಯ ವಿವಿಧ ಹಂತಗಳನ್ನು ತಿಳಿದುಕೊಳ್ಳುವುದು

ಆಶಯ :

ಬಂಡವಾಳ ಶಾಹಿತ್ವದಿಂದ ಸಾಮ್ರಾಜ್ಯಶಾಹಿತ್ವದೆಡೆಗೆ

■ ಕೈಗಾರಿಕಾ ಕ್ರಾಂತಿಯು ವಸಾಹತುಶಾಹಿತ್ವಕ್ಕೆ ಹೇಗೆ ಕಾರಣವಾಯಿತೆಂದು ಕಂಡುಕೊಂಡು ಫ್ಲೋಚಾರ್ಟ್ ಭರ್ತಿ ಮಾಡಿರಿ.



**ಚಟುವಟಿಕೆ 2**

**ಕಲಿಕಾ ಸಾಧನೆ :**

- ಒಂದನೇ ಜಾಗತಿಕ ಯುದ್ಧಕ್ಕೆ ಕಾರಣವಾದ ಘಟಕಗಳನ್ನು ವಿಶ್ಲೇಷಿಸುವುದು.

**ಆಶಯ : ಒಂದನೆಯ ಜಾಗತಿಕ ಯುದ್ಧ**

■ ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಿನ ಬಿಕ್ಕಟ್ಟುಗಳು ಜಗತ್ತಿನ ದೇಶಗಳನ್ನು ಒಂದನೆಯ ಜಾಗತಿಕ ಯುದ್ಧದ ಕಡೆಗೆ ಮುನ್ನಡೆಸಿತು. ಇದಕ್ಕೆ ಕಾರಣವಾದ ಘಟಕಗಳನ್ನು ಕಂಡುಹಿಡಿದು ಪಟ್ಟಿ ತಯಾರಿಸಿರಿ.

- ಆಕ್ರಮಣಕಾರಿ ರಾಷ್ಟ್ರೀಯತೆ
- 
- 
- 
- 
- 

# ಸಮಾಜವಿಜ್ಞಾನ - II

ಯೂನಿಟ್ – 1

## ಋತುಭೇದಗಳು ಮತ್ತು ಸಮಯ

**ಚಟುವಟಿಕೆ 1**


- ತರಗತಿ 6 – ಯೂನಿಟ್ 5 : ಭೂಮಿ ಕಥೆಯೂ ವಿಚಾರವೂ

**ಕಲಿಕಾ ಸಾಧನೆ**

- ಭೂಮಿಯಲ್ಲಿ ಅಕ್ಷಾಂಶ ಮತ್ತು ರೇಖಾಂಶ ರೇಖೆಗಳನ್ನು ಉಪಯೋಗಿಸಿಕೊಂಡು ಸ್ಥಾನನಿರ್ಣಯ ಮಾಡುವುದು.
- ಪರಿಭ್ರಮಣ ಮತ್ತು ಪರಿಕ್ರಮಣಗಳು ಭೂಮಿಯಲ್ಲಿ ಉಂಟುಮಾಡುವ ಪರಿಣಾಮಗಳೇನೆಂದು ತಿಳಿಯುವುದು.


ಗ್ಲೋಬಿನಲ್ಲಿ ಅಡ್ಡಕ್ಕೆ ಮತ್ತು ಉದ್ದಕ್ಕೆ ಎಳೆದಿರುವ ರೇಖೆಗಳನ್ನು ಅಕ್ಷಾಂಶ ರೇಖಾಂಶ ರೇಖೆಗಳೆನ್ನುವರು. ಭೂಪಟ ಮತ್ತು ಗ್ಲೋಬಿನಲ್ಲಿ ಚಿತ್ರೀಕರಿಸಿರುವ ಈ ರೇಖೆಗಳು ಕಾಲ್ಪನಿಕ ರೇಖೆಗಳಾಗಿವೆ.

ಭೂಮಿಯ ಕೇಂದ್ರದಿಂದ ಭೂಮಿಯ ಪ್ರತಿಯೊಂದು ಬಿಂದುವಿಗಿರುವ ಕೋನೀಯ ಅಂತರದಲ್ಲಿ ಅಕ್ಷಾಂಶ ರೇಖೆಗಳಿವೆ. ಈ ಕೋನೀಯ ಅಳತೆಗಳನ್ನು ಜೋಡಿಸಿದ ರೇಖೆಗಳು ಅಕ್ಷಾಂಶ ರೇಖೆಗಳಾಗಿವೆ. ಗ್ಲೋಬಿನ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವಗಳನ್ನು ಜೋಡಿಸುವ ವಕ್ರರೇಖೆಗಳು ರೇಖಾಂಶ ರೇಖೆಗಳಾಗಿವೆ.





(i) ಕೆಳಗೆ ನೀಡಿರುವ ಚಿತ್ರದಲ್ಲಿ ಪ್ರಧಾನ ಅಕ್ಷಾಂಶ ರೇಖೆಗಳನ್ನು ಕಂಡುಹಿಡಿದು ಪಟ್ಟಿಯನ್ನು ಭರ್ತಿ ಮಾಡಿರಿ.




| ಪ್ರಧಾನ ಅಕ್ಷಾಂಶ ರೇಖೆ | ವಿಶೇಷತೆ |
|---|---|
| ಭೂಮಧ್ಯ ರೇಖೆ | • ಭೂಮಿಯ ಮಧ್ಯಭಾಗದಲ್ಲಿ ಹಾದು ಹೋಗುವ ಕಾಲ್ಪನಿಕ ರೇಖೆ<br>• ಭೂಮಿಯನ್ನು ಎರಡು ಅರ್ಧಗೋಲಗಳಾಗಿ ವಿಂಗಡಿಸುವುದು.<br>• $0^0$ ಅಕ್ಷಾಂಶ ರೇಖೆ |
| ಉತ್ತರಾಯಣ ರೇಖೆ | • .............................. ಎ ...................................... |
| .......................... ಬಿ .......................... | • $23½^0$ ದಕ್ಷಿಣ ಅಕ್ಷಾಂಶ ರೇಖೆ |
| ಆರ್ಕಟಿಕ್ ವೃತ್ತ | .......................... ಸಿ .......................... |
| .......................... ಡಿ .......................... | .......................... ಇ .......................... |
| ಉತ್ತರ ಧ್ರುವ | .......................... ಎಫ್ .......................... |
| .......................... ಜಿ .......................... | $90^0$ ಉತ್ತರ ಅಕ್ಷಾಂಶ ರೇಖೆ |

(ii) **ಕಂಡುಹಿಡಿಯಬಹುದೇ?**

ಎ) ಭೂಮಿಯನ್ನು ಎರಡು ಅರ್ಧಗೋಳಗಳಾಗಿ ವಿಂಗಡಿಸುವ ಅಕ್ಷಾಂಶ ರೇಖೆ [ ]

ಬಿ) ಭೂಮಧ್ಯರೇಖೆಯ ಉತ್ತರದಲ್ಲಿ ಸ್ಥಿತಿಗೊಂಡಿರುವ ಅರ್ಧಗೋಲ [ ]

ಸಿ) ಭೂಮಧ್ಯ ರೇಖೆಯ ದಕ್ಷಿಣ ಭಾಗದಲ್ಲಿ ಸ್ಥಿತಿಗೊಂಡಿರುವ ಅರ್ಧಗೋಲ [ ]

**ಚಟುವಟಿಕೆ 2**


**ಕಲಿಕಾ ಸಾಧನೆ :**

- ವಿವಿಧ ಋತುಗಳು ಯಾವುವು, ಪ್ರತಿಯೊಂದು ಋತುಗಳು ವಾತಾವರಣದಲ್ಲಿ ಮತ್ತು ಪರಿಸರದಲ್ಲಿ ಉಂಟುಮಾಡುವ ಬದಲಾವಣೆಗಳೇನೆಂದು ನಿರೀಕ್ಷಣೆ ಮಾಡಿ ವಿವರಿಸುವುದು.

**ಆಶಯಗಳು**

- ಬೇಸಿಗೆ ಕಾಲ, ಶೈತ್ಯಕಾಲ
- ವಿಷುವತ್ಸಂಕ್ರಾಂತಿ (ಸಮರಾತ್ರಿ ದಿನಗಳು)
- ಅಯನಾಂತರ ದಿನಗಳು (ಸೂರ್ಯನ ಆಯನ)
- ವಸಂತ ಕಾಲ, ಹೇಮಂತ ಕಾಲ

■ ಚಿತ್ರವನ್ನು ನಿರೀಕ್ಷಣೆ ಮಾಡಿ, ಋತುಭೇದಗಳಿಗೆ ಕಾರಣವಾಗುವ ಘಟಕಗಳನ್ನು ಬರೆಯಿರಿ.





ಚಿತ್ರ 1–1

ಋತುಭೇದಗಳಿಗೆ ಕಾರಣವಾಗುವ ಘಟಕಗಳು :

- 
- 
- 
- 

**ಚಟುವಟಿಕೆ 3**

- ಚಿತ್ರವನ್ನು ನಿರೀಕ್ಷಣೆ ಮಾಡಿ ಪಟ್ಟಿಯನ್ನು ಭರ್ತಿ ಮಾಡಿರಿ.




| ಸೂರ್ಯನ ಅಯನ | ತಿಂಗಳು | ಋತುಗಳು | |
|---|---|---|---|
| | | ಉತ್ತರಾರ್ಧ ಗೋಲ | ದಕ್ಷಿಣಾರ್ಧ ಗೋಲ |
| ದಕ್ಷಿಣಾಯನ ರೇಖೆಯಿಂದ ಭೂಮಧ್ಯ ರೇಖೆಗೆ | ........... ಸಿ ............ | ಶೈತ್ಯ | ........... ಜಿ ............ |
| ........... ಎ ............ | ಮಾರ್ಚ್ 21ರಿಂದ ಜೂನ್ 21ರ ವರೆಗೆ | ........... ಇ ............ | ಹೇಮಂತ |
| ಉತ್ತರಾಯಣ ರೇಖೆಯಿಂದ ಭೂಮಧ್ಯ ರೇಖೆಯ ಕಡೆಗೆ | ........... ಡಿ ............ | ಗ್ರೀಷ್ಮ | .......... ಎಚ್ ......... |
| ........... ಬಿ ............ | ಸೆಪ್ಟೆಂಬರ್ 23ರಿಂದ ಡಿಸೆಂಬರ್ 22ರ ವರೆಗೆ | .......... ಎಫ್ ......... | ವಸಂತ |

ಯೂನಿಟ್ – 2

## ಮಾರುತಗಳ ಮೂಲವನ್ನು ಹುಡುಕಿ

**ಚಟುವಟಿಕೆ 1**

ತರಗತಿ 7 – ಯೂನಿಟ್ 12 : ಸೌರತಾಪ ಮತ್ತು ವಾತಾವರಣದ ಸ್ಥಿತಿಗತಿ

**ಕಲಿಕಾ ಸಾಧನೆ**

- ಉಷ್ಣತೆ, ಒತ್ತಡ, ವಾಯುವಿನ ಚಲನೆ ಇವುಗಳ ನಡುವಿನ ಪರಸ್ಪರ ಸಂಬಂಧವನ್ನು ವಿಶ್ಲೇಷಿಸುವುದು.

ಯೂನಿಟ್ 2 : ಮಾರುತಗಳ ಮೂಲವನ್ನು ಹುಡುಕಿ

**ಕಲಿಕಾ ಸಾಧನೆ**

■ ವಾಯುವಿನ ಒತ್ತಡವು ಎಲ್ಲಾ ಕಡೆಗಳಲ್ಲಿ ಒಂದೇ ರೀತಿಯಾಗಿರುವುದಿಲ್ಲ ಎಂದು ವಿವರಿಸುವುದು.

**ಆಶಯಗಳು**

ವಾತಾವರಣ, ಒತ್ತಡದ ವಿತರಣೆ, ಎತ್ತರ ಮತ್ತು ವಾತಾವರಣದ ಒತ್ತಡ, ಉಷ್ಣತೆ ಮತ್ತು ವಾತಾವರಣದ ಒತ್ತಡ, ಆರ್ದ್ರತೆ

ಭೂಮಿಯ ಮೇಲ್ಮೈಯ ಎಲ್ಲ ಕಡೆಗಳಲ್ಲಿಯೂ ಸೌರ ವಿಕಿರಣವು ಒಂದೇ ರೀತಿಯಲ್ಲಿ ಲಭಿಸುವುದಿಲ್ಲ. ಭೂಮಧ್ಯ ರೇಖೆಯಲ್ಲಿ ಸೂರ್ಯನ ಕಿರಣವು ಲಂಬವಾಗಿ ಬೀಳುವುದರಿಂದ ಉಷ್ಣತೆಯು ಹೆಚ್ಚಾಗಿರುವುದು. ಧ್ರುವಗಳ ಕಡೆಗೆ ಸಾಗಿದಂತೆ ಸೂರ್ಯಕಿರಣವು ಓರೆಯಾಗಿ ಬೀಳುವುದರಿಂದ ಉಷ್ಣತೆಯು ಕ್ರಮೇಣ ಕಡಿಮೆಯಾಗುವುದು. ಆದ್ದರಿಂದ ಪ್ರತಿಯೊಂದು ಅಕ್ಷಾಂಶ ರೇಖೆಗೆ ಅನುಗುಣವಾಗಿ ಭೂಮಿಯ ವಿವಿಧ ಪ್ರದೇಶಗಳಲ್ಲಿ ಉಷ್ಣತೆಯಲ್ಲಿ ವ್ಯತ್ಯಾಸವು ಕಂಡುಬರುವುದು. ಇತರ ವಸ್ತುಗಳಂತೆಯೇ ವಾಯುವಿಗೂ ಭಾರವಿದೆ.

**ಪಟ್ಟಿಯನ್ನು ಭರ್ತಿ ಮಾಡಿರಿ**

| | |
|---|---|
| ಎ. ವಾತಾವರಣದ ವಾಯು ಭೂಮಿಯ ಮೇಲೆ ಹಾಕುವ ಭಾರ | |
| ಬಿ. ವಾತಾವರಣದ ಒತ್ತಡವನ್ನು ಅಳೆಯುವ ಉಪಕರಣ | |
| ಸಿ. ಒತ್ತಡವನ್ನು ಅಳೆಯುವ ಮಾನ | |

**ಚಟುವಟಿಕೆ 2**

**ಕಲಿಕಾ ಸಾಧನೆ**


ಜಾಗತಿಕ ಒತ್ತಡ ವಲಯವನ್ನು ಚಿತ್ರೀಕರಿಸಿರಿ.

**ಆಶಯ :**

ಜಾಗತಿಕ ಒತ್ತಡ ವಲಯಗಳು

**ಚಟುವಟಿಕೆ**

■ ಚಿತ್ರವನ್ನು ನಿರೀಕ್ಷಣೆ ಮಾಡಿ ಜಾಗತಿಕ ಒತ್ತಡ ವಲಯ ಮತ್ತು ಅಕ್ಷಾಂಶ ವ್ಯಾಪ್ತಿಯನ್ನು ಪಟ್ಟಿ ಮಾಡಿರಿ.



| ಜಾಗತಿಕ ಒತ್ತಡ ವಲಯಗಳು | ಅಕ್ಷಾಂಶ ವ್ಯಾಪ್ತಿ |
|---|---|
| | |

**ಚಟುವಟಿಕೆ 3**


**ಕಲಿಕಾ ಸಾಧನೆ**

ವಿವಿಧ ರೀತಿಯ ಗಾಳಿಗಳನ್ನು ವರ್ಗೀಕರಿಸುವುದು.

**ಆಶಯ :**

ವಾತಾವರಣದ ಒತ್ತಡ ಮತ್ತು ಗಾಳಿ

- ಚಿತ್ರವನ್ನು ನಿರೀಕ್ಷಣೆ ಮಾಡಿ ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.




| ಗಾಳಿ | ಒತ್ತಡ ವಲಯಗಳ ಅಕ್ಷಾಂಶ ಸ್ಥಾನ | ಬೀಸುವ ದಿಕ್ಕು |
|---|---|---|
| ಈಶಾನ್ಯ ವಾಣಿಜ್ಯ ಮಾರುತಗಳು | ಉಪ ಉಷ್ಣ ವಲಯದ ಅಧಿಕ ಒತ್ತಡ ವಲಯದಿಂದ ಭೂಮಧ್ಯರೇಖಾ ಕಡಿಮೆ ಒತ್ತಡ ವಲಯಕ್ಕೆ ಬೀಸುವುದು | ..................... ಸಿ .................. |
| ಪಶ್ಚಿಮ ಮಾರುತಗಳು | ..................... ಬಿ ....................... | ಪಶ್ಚಿಮ ದಿಕ್ಕಿನಿಂದ ಬೀಸುವುದು |
| ............. ಎ ................ | ಧ್ರುವೀಯ ಅಧಿಕ ಒತ್ತಡ ವಲಯದಿಂದ ಉಪಧ್ರುವೀಯ ಕಡಿಮೆ ಒತ್ತಡ ವಲಯಕ್ಕೆ ಬೀಸುವುದು | ಪೂರ್ವ ದಿಕ್ಕಿನಿಂದ ಬೀಸುವುದು |

* * *